International Journal of Kannada Research 2024; 10(1): 44-48

International Journal of Kannada Research
www.kannadajournal.com

ISSN: 2454–5813
IJKR 2024; 10(1): 44-48
© 2024 IJKR
www.kannadajournal.com
Received: 22-12-2023
Accepted: 26-01-2024

**ಡಾ. ಗೋವಿಂದರಾಯ ಎಂ**
ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್, ಕರ್ನಾಟಕ, ಭಾರತ

**Corresponding Author:**
**ಡಾ. ಗೋವಿಂದರಾಯ ಎಂ**
ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್, ಕರ್ನಾಟಕ, ಭಾರತ

# ವಚನ ಸಂಪತ್ತು ನಿಜವಾದ ಜ್ಞಾನ ಸಂಪತ್ತು

**ಡಾ. ಗೋವಿಂದರಾಯ ಎಂ**

**ಪೀಠಿಕೆ**

ವಚನ ಸಂಪತ್ತು ಸಾಹಿತ್ಯ ರೂಪವಾಗಿ, ಸಮಾಜ ಸುಧಾರಣೆಗಾಗಿ ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕಾಗಿ ಆ ಮೂಲಕ ಜಗತ್ತಿನ ಉದ್ಧಾರಕ್ಕಾಗಿ ಕನ್ನಡಿಗರನ್ನು ಭಾರತೀಯರನ್ನು ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ ಮಾನಸಿಕವಾಗಿ, ಧಾರ್ಮಿಕವಾಗಿ, ಸಾಹಿತ್ಯಿಕವಾಗಿ ನೈತಿಕವಾಗಿ, ಸಿರಿವಂತರನ್ನಾಗಿ ಮಾಡುವ ಮೂಲಕ ಉತ್ತಮ ಸಮಾಜದ ನಿರ್ಮಾಣಕ್ಕೆ ಕಾರಣವಾಯಿತೆಂಬಲ್ಲಿ ಸಂದೇಹವಿಲ್ಲ. ಹನ್ನೆರಡನೇ ಶತಮಾನದ ಅನುಭವ ಮಂಟಪದ ಶಿವಶರಣ, ಶಿವಶರಣೆಯರು ಸಮಾಜ ಸುಧಾರಕರಾಗಿ ವರ್ತಮಾನದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲತತ್ತ್ವಗಳನ್ನು ಸಾರ್ವಕಾಲೀಕ ಮಹತ್ವದ ಇಂಗಿತವನ್ನು ಬಯಸಿ 'ಜಗದ ಕಲ್ಯಾಣ'ದೊಳಗೆ ಆತ್ಮಕಲ್ಯಾಣವನ್ನು ಬಯಸಿದ ಶ್ರೇಷ್ಠ ದಾರ್ಶನಿಕರೆಂದರೆ ತಪ್ಪಾಗದು. ವಚನ ಸಾಹಿತ್ಯ ದುರ್ಬಲರನ್ನು ಸಬಲರಾಗಲು, ಅಜ್ಞಾನಿಗಳು ಸುಜ್ಞಾನಿಗಳಾಗಲು ಭ್ರಷ್ಟರು ನೀತಿವಂತರಾಗಲು, ಅಪ್ರಮಾಣಿಕರು ಪ್ರಮಾಣಿಕರಾಗಲು, ಮೋಸಗಾರರು ಸತ್ಯವಂತರಾಗಲು, ಜಾತಿವಾದಿಗಲು ಜಾತ್ಯಾತೀತರಾಗಲು, ಕ್ರೂರಿಗಳು ದಯಾಮಯಿಗಳಾಗಲು, ಹೇಡಿಗಳು ಶೂರರಾಗಲು ಬೇರೆಯವರ ಆಸ್ತಿ, ಧನ ಬಯಸುವವರು ಅದರಿಂದ ಮುಕ್ತರಾಗಲು ಬೇಕಾದ ನೈತಿಕ ಸ್ಥೈರ್ಯ, ಮಾನಸಿಕ ಧೈರ್ಯ ನೀಡಿರುವುದು ವಿಶೇಷವೇ ಸರಿ.

ಕಲ್ಯಾಣ ರಾಜ್ಯದ ಕನಸುಕಂಡ ವಚನಕಾರರು ವ್ಯಕ್ತಿ ಎಲ್ಲಾ ರೀತಿಯಿಂದಲೂ ಸ್ವಾತಂತ್ರ್ಯವನ್ನು ಪಡೆಯಬೇಕು, ಜಾತಿ ಶೋಷಣೆ ನಿರ್ಮೂಲನೆಯಾಗಬೇಕು, ಅಸ್ಪೃಶ್ಯತೆ ಬುಡ ಸಮೇತ ನಿರ್ನಾಮವಾಗಬೇಕು. ಕಾಯಕದ ಮೂಲಕ ದುಡಿದು ತಿನ್ನಬೇಕು. ಸೋಮಾರಿತನ ದೂರವಾಗಬೇಕೆಂಬ ಮಹದಿಚ್ಛೆಯನ್ನು ಕಂಡವರು. ನಡೆ–ನುಡಿಯಲ್ಲಿ ಸಮಾನಭಾವ, ಸಹೋದರತ್ವ, ದಾಸೋಹ–ಕಾಯಕ ಸರ್ವರನ್ನು ಏಕ ಭಾವದಿಂದ ನೋಡುವ ವೈಶಾಲ್ಯ ಗುಣ, ದಯೆಯೇ ಧರ್ಮದ ಮೂಲವೆಂಬ ತಾತ್ವಿಕತೆ ಅಂತರಂಗ ಬಹಿರಂಗ ಶುದ್ಧಿಯೇ ಧರ್ಮದ ಮೂಲಮಂತ್ರ, ಗುರು–ಲಿಂಗ–ಜಂಗಮದಲ್ಲಿ ಭೇದವೆನಿಸದ ಅರಿವು, ಸ್ತ್ರೀ–ಪುರುಷ ಎಂಬ ದೈಹಿಕ ಲಕ್ಷಣಗಳ ಕಾರಣಕ್ಕೆ ಭೇದಮಾಡಬಾರದು. ಶರಣ ಸತಿ–ಲಿಂಗಪತಿ ಎಂಬ ಭಾವ ಮುಖ್ಯವಾಗಬೇಕೆಂಬ ನಿಲುವು, ಕಾರ್ಯದ ಕಾರಣಕ್ಕೆ ಬಂದಿರುವ ಜಾತಿಯ ಕಲ್ಪನೆ ಹುಸಿಯಾಗಿದ್ದು, ದೇವ ಸಹಿತ ಭಕ್ತನ ಕಾರ್ಯವನ್ನು ಪ್ರಶ್ನಿಸಬಾರದು, ಎಲ್ಲಾ ಕಾಯಕಗಳು ಸಮಾನವಾಗಿರುವುದರಿಂದ ಮನುಷ್ಯರು ಸಮಾನರು, ಇಹದ ಬದುಕು, ಪರದ ಬದುಕಿಗೆ ನೆಮ್ಮದಿ, ಖಂಡಿತಾ ತಂದೇತರುತ್ತದೆ ಎಂಬ ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರೆಂಬ, ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರೆಂಬ ಖಚಿತ ವ್ಯಾಖ್ಯಾನ, ಜನವಾಣಿ ದೇವವಾಣಿಯಾಗದಿದ್ದಾಗ, ಆ ದೇವವಾಣಿಯನ್ನೇ ಜನವಾಣಿಯಾಗಿಸಿದ, ನಾವಾಡುವ ಪ್ರತಿಮಾತು ನಮಗೆ ಪ್ರತಿಜ್ಞೆಯಾಗಿರಬೇಕು, ಆ ಮಾತಿಗೆ ತಪ್ಪಿ ನಡೆದುಕೊಳ್ಳಬಾರದೆಂಬುದನ್ನು ತಿಳಿಸಿದವರು ವಚನಕಾರರು.

ಮನುಷ್ಯನ ಅಂತರಂಗ ಯುದ್ಧರಂಗವಾಗಿ ಗೊಂದಲದ ಗೂಡಾಗುತ್ತಿದೆ. ಆಧುನಿಕತೆ, ವಿಜ್ಞಾನ, ತಂತ್ರಜ್ಞಾನದ ಮಾಯಾಜಾಲದಲ್ಲಿ ಅಧರ್ಮ, ಅಕ್ರಮ, ಅನೀತಿ, ಕೊಲೆ, ಸುಲಿಗೆ, ದರೋಡೆ, ಭ್ರಷ್ಟಾಚಾರ, ಅಸಹಿಷ್ಣುತೆ ಹೆಚ್ಚಾಗುತ್ತಿರುವ ಇಂದಿನ ಜಗತ್ತಿಗೆ ವಚನಕಾರರ ನುಡಿಮುತ್ತುಗಳು ದಿವ್ಯೌಷಧಗಳಾಗಿವೆ.

> ಕಡೆಗೀಲಿಲ್ಲದ ಬಂಡಿ, ಹೊಡೆಗಡೆಯದೆ ಮಾಣ್ಬುದೆ
> ಕಡೆಗೀಲು ಬಂಡಿಗಾಧಾರ

ಮೃಢಶರಣರ ನುಡಿಗಡಣವೇ
ಕಡೆಗೀಲು ಕಾಣಾ ರಾಮನಾಥ!

ಬಂಡಿ ಯಶಸ್ವಿಯಾಗಿ ಚಲಿಸಬೇಕಾದರ ಕಡೆಗೀಲು ಮುಖ್ಯ. ಕಡೆಗೀಲು ಸರಿಯಿರದಿದ್ದರೆ ಬಂಡಿ ಮುಂದೆ ಹೋಗದೆ ಉರುಳುತ್ತದೆ. ಕಡುದರ್ಪದಿಂದ ಕೂಡಿದ ಶರೀರವೆಂಬ ಬಂಡಿಗೆ ಶರಣಸಾಹಿತ್ಯದ ಅಮೃತತ್ವ ನುಡಿಗಳಿಲ್ಲದಿದ್ದರೆ ಒಡಲೆಂಬ ಬಂಡಿ ಬೀಳುವುದರಲ್ಲಿ ಸಂದೇಹವಿಲ್ಲ. ಆದ್ಯ ವಚನಕಾರರಾದ ಜೇಡರ ದಾಸಿಮಯ್ಯನವರು ದೇಹವನ್ನು ಬಂಡಿಗೆ ಹೋಲಿಸಿ ಅತ್ಯಂತ ಅರ್ಥಪೂರ್ಣವಾದ ಸಂದೇಶವನ್ನು ನೀಡಿದ್ದಾರೆ. ಕಡೆಗೀಲು ಬಂಡಿಗೆ ಅತ್ಯಂತ ಅಗತ್ಯ, ಕಡೆಗೀಲು ಇಲ್ಲದೆ ಹೋದರೆ ಬಂಡಿ ಎತ್ತೆಂದರತ್ತೆ ಚಲಿಸುತ್ತದೆ. ಆ ಗಾಡಿಯ ಚಕ್ರವನ್ನು ನಿಯಂತ್ರಣದಲ್ಲಿಡಲು ಕಡೆಗೀಲು ತುಂಬಾ ಅಗತ್ಯ. ಅಂತೆಯೆ ಬಂಡಿಯ ಕಡೆಗೀಲಿಗೆ ದೇಹವನ್ನು ಹೋಲಿಸಿ ಈ ದೇಹವೆಂಬ ಬಂಡಿ ಹೋಗಲು ಶರಣರ ನುಡಿ ತತ್ವಗಳು ಬದುಕಿಗೆ ಆಧಾರ ಎಂದು ಹೇಳಿದ್ದಾರೆ. ಅದೇ ರೀತಿ ಆತ ತನ್ನದೇ ಮತ್ತೊಂದು ವಚನದಲ್ಲಿ ತಿಳಿಸಿರುವಂತೆ

ಕರಿಯನಿತ್ತೊಡೆ ಒಲ್ಲೆ
ಸಿರಿಯನಿತ್ತೊಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ

ಒಂದರಗಳಿಗೆ ಇತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥ ಎನ್ನುತ್ತಾರೆ. ಬಹುತೇಕ ಇಂದಿನ ಸಮಸ್ಯೆಗಳಿಗೆ ದಾರ್ಶನಿಕರ ಮಾತು, ಶರಣರ ಸತ್ ಚಿಂತನೆಗಳ ತಾತ್ಪರ್ಯ ಯುವ ಜನಾಂಗಕ್ಕೆ ಅರ್ಥವಾಗದಿರುವುದು ಬಹು ವಿಷಾದನೀಯವಾದುದಾಗಿದೆ. ಸಜ್ಜನರ ಸಂದೇಶಗಳು, ದಾರ್ಶನಿಕರ ನೀತಿ ಬೋಧೆಗಳು ಸಮಾಜಕ್ಕೆ ಅತ್ಯಂತ ಅಗತ್ಯವಾಗಿ ಬೇಕಾಗಿದ್ದು ಅವುಗಳನ್ನು ಇಂದಿನ ಜನಾಂಗ ಅರ್ಥ ಮಾಡಿಕೊಳ್ಳಬೇಕಾಗಿದೆ. ಅನುಭವಮಂಟಪ ಎಲ್ಲಾ ಶರಣರ ಅನುಭವಗಳನ್ನು ವಿಚಾರ ಮಂಥನದ ಮೂಲಕ ಮಥಿಸಿ ಅದರ ಸಾರವನ್ನು ತಿಳಿಸಿದ ವಿಚಾರ ವೇದಿಕೆಯಾಗಿದೆ. ಆ ಕಾರಣಕ್ಕಾಗಿ ಶರಣರ ಸೂಳ್ನುಡಿ ಬಹು ಮಹತ್ವದ ಪಾತ್ರವನ್ನು ವಹಿಸುತ್ತದೆ. ಇಂದಿನ ಬಹುತೇಕ ಸಮಸ್ಯೆ, ಗೊಂದಲ, ಮಾನಸಿಕ ಅಸ್ವಸ್ಥತೆಗೆ ಶರಣರ ಸಂತರ ವಿಚಾರಗಳನ್ನು ತಲುಪಿಸಬೇಕಾಗಿದೆ ಎಂದು ಹೇಳಬಹುದಾಗಿದೆ.

ಅದಕ್ಕೆ ಪರಿಹಾರವೇನು ಎಂದರೆ...
ವಚಿಸಿ ಅನುಭವಿಯಾಗದವ ಪಿಶಾಚಿಯಯ್ಯ
ವಚಿಸಿ ಅನುಭವಿಯಾಗದವ ಪಂಡಿತನಯ್ಯ
ವಿದ್ಯೆಯೆಂಬು ಅಭ್ಯಾಸಿಕನ ಕೈವಶ
ಅವಿದ್ಯೆಯೆಂಬುದು ಸರ್ವರಲ್ಲಿ ವಶ
ವಿದ್ಯಾವಿದ್ಯೆಯನರಿದು ಜಗದ್ವೇದ್ಯನಾಗಬಲ್ಲಡೆ
ಮಹಾಪಂಡಿತ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ

ಎಂಬ ಸಿದ್ಧರಾಮೇಶ್ವರರು ಅವಿದ್ಯೆ, ಅಜ್ಞಾನವನ್ನು ಹೋಗಲಾಡಿಸಲು ವಿದ್ಯೆ ಬೇಕು, ಆ ಅಭ್ಯಾಸಿತನಿಗೆ ಶ್ರದ್ಧೆ ಶ್ರಮ ಬೇಕು ಎನ್ನುತ್ತಾರೆ. ಓದಿದರಷ್ಟೇ ಸಾಲದು, ಅದು ಅನುಭವ ವೇದ್ಯವಾಗಬೇಕು, ಆಗ ವಿದ್ಯಾವಿದ್ಯೆಯನ್ನರಿತು 'ನಿಜವಾದ ವಿದ್ಯೆ' ಅಥವಾ 'ಪರಾ'ವಿದ್ಯೆಯನ್ನು ಅರಿತವನಾದರೆ ಆತ ಮಹಾಪಂಡಿತ ಅಥವಾ ಅನುಭಾವ ಪಡೆಯುತ್ತಾನೆ. 'ಚಿತ್ತ ಹುತ್ತಗಟ್ಟಿದಾಗ' ಸಮಾಜದ, ಲೋಕದ ಹಿತಕ್ಕಾಗಿ ಆಲೋಚಿಸುತ್ತಾರೆ. ಈ ವಚನ ವಿದ್ಯೆ ಮತ್ತು ಅವಿದ್ಯೆಯನ್ನು ಕುರಿತಂತೆ ನಮ್ಮ ಚಿಂತನೆಯನ್ನು ವಿಚಾರದ ಕಡೆಗೆ ಹಚ್ಚುತ್ತದೆ. ವಿದ್ಯೆ ಎಂಬುದು ಯಾರೂ ಕದಿಯಲಾಗದ ಸಂಪತ್ತು. ಕಳ್ಳನು ಅಪಹರಿಸುವುದಿಲ್ಲ, ಅದು ಹೆಚ್ಚು ಭಾರವೆನಿಸುವುದೂ ಇಲ್ಲ, ಯಾರೋ ಸೋದರರಿಗೆ ಭಾಗ ಮಾಡಿ ಕೊಡುವುದಿಲ್ಲ, ಅಂತಹ ವಿದ್ಯೆಯನ್ನು ಪಡೆದರೆ ಜಗತ್ತಿನ ಎಲ್ಲಾ ಕಡೆಯೂ ಕೂಡ ಗೌರವಕ್ಕೆ ಪಾತ್ರರಾಗುತ್ತಾರೆ ಎಂಬ ಸುಭಾಷಿತದ ಮಾತೊಂದಿದೆ. ರಾಜ ತನ್ನ ರಾಜ್ಯದಲ್ಲಿ ಮಾತ್ರ ಪೂಜಿತಗೊಂಡರೆ, ಪಂಡಿತ ಇಡೀ ಜಗತ್ತಿನಲ್ಲಿ ಎಲ್ಲಾ ಕಡೆಯೂ ಗೌರವಕ್ಕೆ ಪಾತ್ರನಾಗುತ್ತಾನೆ ಎಂಬಂತೆ ವಚಿಸಿ ಅನುಭವಿಯಾಗುವ ವ್ಯಕ್ತಿ ಮಹಾನ್ ಪಂಡಿತನಾಗುತ್ತಾನೆ. ಓದಿ ಅನುಭವಿಯಾಗದಿದ್ದರೆ ಆತನಿಗೆ ವಿದ್ಯೆಯ ಪರಿಪೂರ್ಣತೆ ಸಾರ್ಥಕವಾಗಿ ಕಂಡಿರುವುದಿಲ್ಲ. ವಿದ್ಯೆ ಮತ್ತು ಅವಿದ್ಯೆಯ ನಡುವಿನ ವ್ಯತ್ಯಾಸವನ್ನು ಅರಿತು ಆ ಅಕ್ಷರವನ್ನು ಅರಿವನ್ನಾಗಿ ಮಾಡಿಕೊಂಡು ಅನುಭವದ ಮೂಲಕ ಅನುಭಾವದ ಎತ್ತರಕ್ಕೆ ವ್ಯಕ್ತಿಯ ವ್ಯಕ್ತಿತ್ವವನ್ನು ಕೊಂಡೊಯ್ದಾಗ ಅದಕ್ಕೆ ನಿಜವಾದ ಬೆಲೆ ಬರುತ್ತದೆ, ವ್ಯಕ್ತಿ ತನ್ನ ನೆಲೆ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಇದಕ್ಕೆ ವಚನಕಾರರು 'ಅರಿವೇ ಗುರು' ಎಂದು ಕರೆದಿದ್ದಾರೆ. ಭೂಮಿ, ಹೇಮಾ, ಕಾಮಿನಿ ಎಂಬುದು ಮನುಷ್ಯನಿಗೆ ಶಾಶ್ವತವಲ್ಲ ಮತ್ತು ಅದು ನಿಜವಾದ ಸಂಪತ್ತಲ್ಲ. ಮನುಷ್ಯನಿಗೆ ನಿಜವಾದ ಸಂಪತ್ತು ಎಂದರೆ ಅದು ಜ್ಞಾನರತ್ನ. ಅಂತಹ ಜ್ಞಾನರತ್ನವನ್ನು ಕೆಡದೆ ಅಲಂಕರಿಸಿ ಕಾಪಿಟ್ಟುಕೊಳ್ಳಬೇಕಾಗುತ್ತದೆ. ಆಗ ಮಾತ್ರ ಅದಕ್ಕೆ ಮೌಲ್ಯ ಬರುತ್ತದೆ. ವಚನಕಾರರು ತಮ್ಮ ವಚನಗಳ ರಚನೆಗೆ ಶರಣರ ಅನುಭವವನ್ನು ಅವರು ಅರಿವನ್ನಾಗಿ ಮಾಡಿಕೊಂಡರು ತಮ್ಮಲ್ಲಿದ್ದ ಅನೇಕ ಗೊಂದಲಗಳಿಗೆ, ಸಮಸ್ಯೆಗಳಿಗೆ ಪರಿಹಾರವನ್ನು ಆ ಮೂಲಕ ಪಡೆದುಕೊಂಡರು. ಸಮಾಜದ ಅದೆಷ್ಟೋ ಸಮಸ್ಯೆಗಳಿಗೆ ಪರಿಹಾರ ಸಿಗುವುದು ಓದಿನಿಂದ, ಓದನ್ನು ಪಡೆದ ಅನುಭವಿಗಳಿಂದ, ಅನುಭಾವದ ಮೂಲಕ ಕೊಡುವ ದಾರ್ಶನಿಕರ ಸತ್ ಚಿಂತನೆಗಳಿಂದ. ಹಾಗಾಗಿ ಅರಿವಿನ ಮೂಲಕ ಸಮಾಜದ ಸುಧಾರಣೆ ಸಾಧ್ಯ ಎಂಬುದನ್ನು ಮನಗಂಡಿದ್ದರು.

ಲೋಕ ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದ ವಚನಗಾರರು ಅರಿವಿಗೆ ಒತ್ತು ನೀಡಿದವರು. ಶರಣನೆನ್ನಲು 'ಅರಿವು' ಅತ್ಯಗತ್ಯವಾಗಿ ಇರಬೇಕು.

'ತನ್ನ ತಾನರಿದಡೆ ನುಡಿಯೆಲ್ಲಾ ತತ್ವ ನೋಡಾ' ಎಂಬಂತೆ ಈ ಅರಿವು ನಮ್ಮ ವ್ಯಕ್ತಿತ್ವವನ್ನು ಉನ್ನತೀಕರಿಸಿಕೊಳ್ಳುವ ಎಚ್ಚರದ ಸ್ಥಿತಿ. 'ಅರಿತರೆ ಶರಣ , ಮರೆತರೆ ಮಾನವ' ಎಂಬ ನಿಲುವಿನದ್ದು.

ಈ ಅರಿವಿಗೆ ಜ್ಞಾನ, ಪ್ರಜ್ಞೆ, ಎಚ್ಚರ, ತಿಳುವಳಿಕೆ ಎಂಬೆಲ್ಲಾ ಅರ್ಥಗಳಿವೆ. ಅದನ್ನೆ ಬಸವಣ್ಣನವರು

'ಏನನಾದರೆಯೂ ಸಾಧಿಸಬಹುದು
ಮತ್ತೇನನಾದರೆಯೂ ಸಾಧಿಸಬಹುದಯ್ಯಾ
ತಾನಾರೆಂಬುದ ಸಾಧಿಸಬಾರದು
ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ' ಎಂದಿದ್ದಾರೆ.

ತನ್ನ ತಾನರಿಯಲು ಈ ಗುರುವಿನ ಕರುಣೆ ಬೇಕು. ಈ ಗುರು ತೋರಿದ ಜ್ಞಾನಮಾರ್ಗವೇ ಅರಿವಿನ ದಾರಿದೀಪವಾಗುತ್ತದೆ. ತನ್ನನ್ನು ಅರಿಯುವ ಜ್ಞಾನವೇ ಮುಕ್ತಿಗೆ ಶ್ರೇಷ್ಠವಾದ ಕುರುಹಾಗುತ್ತದೆ. ತನ್ನ ಮೂಲಕ ಜಗದ ಕಲ್ಯಾಣಕ್ಕೆ ನಾಂದಿಯಾಗುತ್ತದೆಂಬುದು ವಚನಕಾರರ ಸ್ಪಷ್ಟ ನಿಲುವಾಗಿದೆ.

ಜಾತಿ–ಧರ್ಮದ ಕಾರನಕ್ಕೆ ಸಮಾಜದಲ್ಲಿ ಅನೇಕ ಅಲ್ಲೋಲ–ಕಲ್ಲೋಲವಾಗುತ್ತಿರುವುದಕ್ಕೆ ವಚನಕಾರರಲ್ಲಿ ಉತ್ತರವಿದೆ. ಜಾತಿಭೇದವನ್ನು ವಿರೋಧಿಸಿದ ಶರಣರು ಅನುಭವ ಮಂಟಪದ

ಬಾಗಿಲನ್ನು ತೆರೆದು 'ಇವನಾರವ ಇವನಾರವ ಎಂದೆನಿಸದಿರಯ್ಯ' ಎಂದು ತಿಳಿಹೇಳಿದವರು. ಜಾತಿ ಸೂತಕವನ್ನು ಖಂಡಿಸಿದವರು.

ಶೀಲವಂತನಾದೆಡೆ ಜಾತಿಯ ಬಿಡಬೇಕು
ಶಿವಜ್ಞಾನಿಯಾದಡೆ ಸಮಯ ಬಿಡಬೇಕು
ಹೀಂಗೆಲ್ಲದೆ ಜಗದಲ್ಲಿ ನಡೆವ ಭ್ರಾಂತರ ಸುದ್ದಿಯೇಕೆ
ನಿಭ್ರಾಂತನಾದ ಶರಣಂಗೆ ಅಮುಗೇಶ್ವರಾ?

ಎಂಬ ಅಮುಗೆ ರಾಯಮ್ಮ ವ್ಯಕ್ತಿ ಜಾತಿಯನ್ನು ಬಿಟ್ಟು ಇತರರನ್ನು ಪ್ರೀತಿಯಿಂದ ಕಂಡಾಗ ಮಾತ್ರ ಶೀಲವಂತನಾಗುತ್ತಾನೆ. ಅಮುಗೆ ರಾಯಮ್ಮನ ಈ ವಚನ ಅತ್ಯಂತ ಸಾಂದರ್ಭಿಕ ಮತ್ತು ಔಚಿತ್ಯಪೂರ್ಣವಾದದ್ದಾಗಿದೆ. ಜಾತಿ, ಮತ, ಪಂಥ, ಪಂಗಡ, ಆಚಾರ – ವಿಚಾರ ಎಂಬ ಮನೋವಿಕಾರಗಳು ಮನುಷ್ಯ–ಮನುಷ್ಯರನ್ನು ಬೇರ್ಪಡಿಸಿ ಮಾನವೀಯತೆಯ ಬದಲಿಗೆ ಪ್ರತ್ಯೇಕತೆಯನ್ನು ತಂದೊಡ್ಡುವ ಮೂಲಕ ಸಮಾಜದಲ್ಲಿ ವಿಷ ಬಿತ್ತನೆಯ ಕಾರ್ಯ ನಡೆಯುತ್ತಿರುವುದು ವಿಷಾದನೀಯವಾದದ್ದಾಗಿದೆ. ಜಾತಿ, ಮತ, ಪಂಥಗಳ ಬಲೆಯಲ್ಲಿ ಸಿಲುಕಿದ ಮನುಷ್ಯ ತನ್ನ ಅಸ್ತಿತ್ವಕ್ಕಾಗಿ ಪರದಾಡಬೇಕಾದ ಸ್ಥಿತಿಯು ಬಂದೊದಗಿದೆ. ಮನುಷ್ಯನನ್ನು ಮನುಷ್ಯನನ್ನಾಗಿ ಕಾಣದೆ ಅವನ ಜಾತಿ, ಕುಲ, ಪಂಥದ ಆಧಾರದ ಮೇಲೆ ಅವನನ್ನು ಪ್ರತ್ಯೇಕಿಸಿ ಮಾನವೀಯ ಸಂಬಂಧಗಳಿಗೆ ಕೊಡಲಿ ಪೆಟ್ಟು ಹಾಕುವ ಇಂದಿನ ಪ್ರಜ್ಞಾವಂತ ಸಮಾಜದ ಸಮುದಾಯಕ್ಕೆ ಅಮುಗೆರಾಯಮ್ಮ ಚಾಟಿ ಏಟನ್ನು ನೀಡಿದ್ದಾಳೆ. ಶೀಲವಂತನಿಗೆ ಯಾವುದೇ ಜಾತಿ ಇಲ್ಲ. ಒಂದು ಕಾಲಕ್ಕೆ ಕಸುಬಿನ ಅಥವಾ ವೃತ್ತಿಯ ಆಧಾರದ ಮೇಲೆ ಅದು ವೃತ್ತಿ ಸೂಚಕವಾಗಿದ್ದ ಗುರುತಿಸುವಿಕೆ ಕಾಲಾನಂತರದಲ್ಲಿ ಅದು ಜಾತಿ ಸೂಚಕವಾಗಿ ಚೌಕಟ್ಟನ್ನು ಹಾಕಿಕೊಳ್ಳಲು ಸಾಧ್ಯವಾಗಿದೆ. ಅದಕ್ಕೆ ಬಸವಣ್ಣನವರು ತಮ್ಮ ಒಂದು ವಚನದಲ್ಲಿ 'ದೇವ ಸಹಿತ ಭಕ್ತ ಮನೆಗೆ ಬಂದಡೆ ನಿಮ್ಮ ಕಾಯಕವಾವುದೆಂದು ಬೆಸಗೊಂಡೊಡೆಯಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ ತಲೆದಂಡ' ಎಂದು ಹೇಳಿದ್ದಾರೆ. ಕಾಯಕವನ್ನು ಅತ್ಯಂತ ಗೌರವದಿಂದ ಕಂಡು, ಕಾಯಕವೇ ಕೈಲಾಸ ಎಂದು ಪರಿಭಾವಿಸಿದ ವಚನಕಾರರಿಗೆ ಕಾಯಕ ತಮ್ಮ ವ್ಯಕ್ತಿತ್ವದ ಸೂಚಕವಾಗಿ ಕಂಡುಬರುತ್ತದೆ. ಬಹುತೇಕ ವಚನಕಾರರು ತಮ್ಮ ಕಾಯಕದ ಮೂಲಕ ತಮ್ಮ ಹೆಸರನ್ನು ಗುರುತಿಸಿಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ವಚನಕಾರರಿಗೆ ಜಾತಿ ಎಂಬುವುದೇ ಇಲ್ಲ. 'ಇವನಾರವ ಇವನಾರವ ಎಂದೆನದೆ ಇವ ನಮ್ಮವ ಇವ ನಮ್ಮವ' ಎಂದು ಎಲ್ಲರನ್ನೂ ತಮ್ಮ ಬಿಗಿ ತೋಳ ಬಂಧನದಲ್ಲಿ ಅಪ್ಪಿಕೊಂಡವರು.

ಕಾಸಿ ಕಮ್ಮಾರನಾದ
ಬೀಸಿ ಮಡಿವಾಳನಾದ
ಆಸನಿಕ್ಕಿ ಸಾಲಿಗನಾದ
ವೇದವನೋದಿ ಹಾರುವನಾದ'

ಎಂಬ ಬಸವಣ್ಣನವರ ನಿಲುವು ಅದು ವೃತ್ತಿ ಸೂಚಕವೇ ಹೊರತು ಜಾತಿಯಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆದರೆ ವರ್ಣಾಶ್ರಮ ವ್ಯವಸ್ಥೆ ತಂದು ನಿಲ್ಲಿಸಿದ ಮನುಷ್ಯನ ವರ್ಗೀಕರಣ ಅನೇಕ ಉಪಜಾತಿಗಳ ಮೂಲಕ ಸಮಾಜವನ್ನು ಛಿದ್ರ ಛಿದ್ರಗೊಳಿಸಿರುವುದನ್ನು ಕಾಣುತ್ತೇವೆ. ಇಂದಿಗೂ ಅದೆಷ್ಟೋ ಜನ ಜಾತಿ – ಧರ್ಮದ ಕಾರಣಕ್ಕಾಗಿ ಮನುಷ್ಯರ ನಡುವೆ ದೊಡ್ಡ ಕಂದಕ ಉಂಟು ಮಾಡಿರುವುದನ್ನು ವಚನಕಾರರು ಖಂಡಿಸುತ್ತಾರೆ.

ಆ ಕಾರಣಕ್ಕಾಗಿಯೇ ಸಮಾಜದ ಅನೇಕ ಸಮಸ್ಯೆಗಳಿಗೆ ವಚನಗಳು ಪರಿಹಾರ ಸೂಚಿಸುವ ದಾರಿದೀಪವಾಗುವಲ್ಲಿ ಎರಡು ಮಾತಿಲ್ಲ.
ಶಿವಶರಣೆಯರು ಸತ್ಯ–ಅಹಿಂಸೆಯಂತಹ ಮೌಲ್ಯವನ್ನು ಕುರಿತು ಹೇಳಿದ್ದಾರೆ. ಸತ್ಯಕ್ಕೆ ಬದ್ಧರಾಗಿ, ಅಹಿಂಸಾ ಮಾರ್ಗದಲ್ಲಿ ನಡೆದರೆ ಅದೇ ಮಹಾಜ್ಞಾನದ ಆಚರಣೆ ಎಂದಿದ್ದಾರೆ. ಧರ್ಮದ ಹೆಸರಿನಲ್ಲಿ ನಡೆಯುವ ಪ್ರಾಣಿಬಲಿ, ಹಿಂಸೆಯನ್ನು ವಿರೋಧಿಸಿದ್ದಾರೆ. ಸಮಾಜದಲ್ಲಿನ ಕಂದಾಚಾರಗಳು, ಮೂಢನಂಬಿಕೆಗಳು, ಮೌಢ್ಯಾಚರಣೆಗಳ ವಿರುದ್ಧ ಸಾಮೂಹಿಕವಾಗಿ ಹೋರಾಡಿದ್ದಾರೆ. ಜಾತಿ ಹೆಸರತಿನಲ್ಲಿ ಕೆಳಜಾತಿಯವರನ್ನು, ಸ್ತ್ರೀಯರನ್ನು ಶೋಷಿಸುವ ವ್ಯವಸ್ಥೆಯನ್ನು ಖಂಡಿಸಿದ್ದಾರೆ.
ಅದಕ್ಕೆ ಬಸವಣ್ಣನವರು ತಮ್ಮ ಮತ್ತೊಂದು ವಚನದಲ್ಲಿ

"ಕಾಯ ವಿಕಾರ ಕಾಹಿಹುದಯ್ಯಾ !
ಮನೋವಿಕಾರ ಕೂಡಿಹುದಯ್ಯಾ !
ಇಂದ್ರಿಯ ವಿಕಾರ ಸುಳಿವುದಯ್ಯಾ !
ಸುಳುವಿನೊಳಗೆ ಸುಳಿವುತ್ತಲಿದ್ದೇನೆ
ಸಿಲುಕದಿರಯ್ಯಾ ! ಅನ್ನ ಚಿತ್ತವಿರಿಸದಿರಯ್ಯ !

ನಿಮ್ಮ ಚಿತ್ತವಿರಿಸಯ್ಯ. ಅನುಪಮ ಸುಖಸಾಗರದ ಶರಣರಲ್ಲಿ ಕೂಡಲ ಸಂಗಮದೇವಯ್ಯ ಇದನೇ ಬೇಡುವೆನಯ್ಯ!" ಎಂದಿದ್ದಾರೆ. ಲೋಕ ಕಲ್ಯಾಣದ ಮೂಲ ತನ್ನ ತಾನರಿಯುವಾಗ, ತನ್ನನ್ನೂ ತಾನು ಸುಧಾರಿರಿಕೊಳ್ಳುವಾಗ, ನನ್ನ ಮನ–ದೇಹ ಹಾಗೂ ಇಂದ್ರಿಯಗಳಲ್ಲಿನ ವಿಕಾರತೆಯಿಂದ ಸಂಸಾರದ ಮಡುವಿನಲ್ಲಿ ಸಾಕಷ್ಟು ಸಂಕಟಗಳಿಗೆ ಕಾರಣವಾಗಿ ಸುತ್ತು ಹಾಕುತ್ತಲಿದ್ದೇನೆ. ಕೆಟ್ಟ ಬುದ್ಧಿಯ ಕೊಟ್ಟು ಸುಳುವಿನ ಸೆಳವಿಗೆ ನನ್ನನ್ನು ದಯವಿಟ್ಟು ನೂಕಬೇಡ. ಓ ಕೂಡಲಸಂಗಮದೇವಾ ! ನನ್ನಲ್ಲಿ ನಿನ್ನನ್ನೇ ಭಜಿಸುವ ಒಳ್ಳೆಯ ಸದ್ಬುದ್ಧಿಯನ್ನಿತ್ತು ಶರಣರ ಸಹವಾಸದಲ್ಲಿರುವಂತೆ ಕರುಣಿಸು ಎಂದು ಬಸವಣ್ಣನವರು ಮೊರೆ ಇಡುವ ಉದ್ದೇಶ ಸುಸಂಸ್ಕೃತ– ಸಭ್ಯ ಸಮಾಜದ ನಿರ್ಮಾಣವಾಗಬೇಕೆಂಬುದು.

'ಕಾಂಚನವೆಂಬ ನಾಯನೆಚ್ಚಿ ನಿಮ್ಮ ನಾನು ಮರೆದೆನಯ್ಯ !
ಕಾಂಚನಕ್ಕೆ ವೇಳೆಯಿಲ್ಲದೆ ಲಿಂಗಕ್ಕೆ ವೇಳೆಯಿಲ್ಲಾ ?
ಹಡಿಕೆಗೆ ಮೆಚ್ಚಿದ ಸೊಣಗ

ಅಮೃತದ ರುಚಿಯ ಬಲ್ಲುದೇ ಕೂಡಲಸಂಗಮದೇವಾ ?'
ಹಣವೆಂಬ ನಾಯಿಯನ್ನು ನಂಬಿ, ನಿಮ್ಮನ್ನು ಮರೆತುಬಿಟ್ಟೆನು. ಇರುವ ಸಮಯವನ್ನು ಹಣ ಶೇಖರಿಸಲು ಕಳೆದೆನೇ ವಿನಃ ಲಿಂಗಪೂಜೆಗಾಗಿ ಸಮಯವನ್ನು ಮೀಸಲಿಡಲಿಲ್ಲ. ಕೊಳಕು, ರಕ್ತ, ಮಾಂಸಗಳನ್ನು ಮೆಚ್ಚಿದ ನಾಯಿಗೆ ಅಮೃತವು ರುಚಿಸದು ಎಂದು ನೊಂದುಕೊಂಡಿದ್ದಾರೆ. ಇಂದಿನ ದುಃಖದ ಸ್ಥಿತಿಗೆ ನಾವು ಅಮೃತವನ್ನು ಬಯಸದಿರುವುದೇ ಆಗಿದೆ ಎಂಬರ್ಥದ ವಚನವನ್ನು ಬಸವಣ್ಣನವರು ತಿಳಿಸಿದ್ದಾರೆ.

ಮಾನವನ ಸ್ವಭಾವದ ಬದಲಾವಣೆ ಆಗಬೇಕೆಂಬುದಕ್ಕೆ
ವಿಷಯವೆಂಬ ಹಸುರನು ಎನ್ನ ಮುಂದೆ ತಂದು ಪಸರಿಸದಿರಯ್ಯ
ಪಶುವೇನಬಲ್ಲುದು ಹಸುರೆಂದೆಳಸುವುದಲ್ಲದೆ !
ವಿಷಯರಹಿತನ ಮಾಡಿ, ಭಕ್ತಿ ರಸವ ದಣಿಯೆ ಮೇಯಿಸಿ
ಸುಬುದ್ಧಿಯೆಂಬ ಉದಕವನೆರೆದು, ನೋಡಿ ಸಲಹಯ್ಯಾ
ಕೂಡಲಸಂಗಮದೇವಾ' ಎಂದು ಬೋಧಿಸುತ್ತಾರೆ.

ಮನುಷ್ಯರ ಸ್ವಭಾವ ಚಿತ್ತ ಚಾಂಚಲ್ಯದಿಂದ ಕೂಡಿದುದಾಗಿದ್ದು, ಈ ಅಸ್ಥಿರತೆಯ ಭಾವ ಹೋಗಲು ಸುಬುದ್ಧಿ ನೀಡಿ ಸಲಹಿದಾಗ ವಿಷಯರಹಿತನಾಗಿ, ಬೇರೆಯವರಿಗೆ ತೊಮದರೆ ಕೊಡದೆ ಬದುಕಲು ಸಾಧ್ಯವಾಗಿ ಸಾಮಾಜಿಕ ಸಾಮರಸ್ಯಕ್ಕೆ, ನೈತಿಕ ನೆಲೆಗಟ್ಟಿನಲ್ಲಿ ಜನರು ಬದುಕಿ ಆ ಮೂಲಕ ಲೋಕಕಲ್ಯಾಣಕ್ಕೆ ದಾರಿಯಾಗುತ್ತದೆಂಬುದನ್ನು ಬಸವಣ್ಣನವರು ತಿಳಿಸಿದ್ದಾರೆ.
ಲೋಕಕಲ್ಯಾಣವಾಗಲು ಆತ್ಮಕಲ್ಯಾಣದ ಅಗತ್ಯ ಬಹಳಷ್ಟಿದೆ.

ಹೊನ್ನಿನೊಳಗೊಂದೊರೆಯ
ಸೀರೆಯೊಳಗೊಂದೆಳೆಯ
ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ!
ನಿಮ್ಮ ಶರಣರಿಗಲ್ಲದೆ ಮತ್ತೊಂದಕ್ಕೆ ಮಾಡೆನು
ಕೂಡಲಸಂಗಮದೇವ.

ಇಂದಿನ ಸ್ವಾರ್ಥ ಸಮಾಜಕ್ಕೆ ಈ ವಚನ ಕೈದೀವಿಗೆಯಾಗಿದೆ. ಸಂಗ್ರಹಿಸಿದಷ್ಟು ದಾಹ, ಅನುಭವಿಸಿದಷ್ಟೂ ಆಸೆ, ಎಷ್ಟು ಬಂದರೂ ಸಾಲದೆಂಬ ದುರಾಸೆ, ಸ್ವಾರ್ಥ ಸುಖಕ್ಕಾಗಿ ಇಂದಿಗಿರಲೆಂದು ನಾಳೆಗಿರಲೆಂದು ಅವಶ್ಯಕತೆಗಿಂತ ಅಧಿಕವಾಗಿ ಧನ–ಕನಕ–ವಸ್ತ್ರಗಳನ್ನು ಮುಚ್ಚಿಟ್ಟಾಗ ಅಭಾವ, ಆಹಾಕಾರವಾಗಿ ಸಮಾಜದಲ್ಲಿ ಅನೇಕ ಅಲ್ಲೋಲ–ಕಲ್ಲೋಲವಾಗುತ್ತದೆ. ಆಗ ಲೋಕದಲ್ಲಿನ ಅಶಾಂತಿ, ಹಿಂಸೆ ಹೆಚ್ಚಾಗಿ ನೆಮ್ಮದಿಗೆ ಭಂಗಬರುತ್ತದೆ.

ಜಗದ ಕಲ್ಯಾಣದೊಳಗಾತ್ಮ ಕಲ್ಯಾಣವನ್ನು
ಜಗದ ಬೀದಿಗಳೊಳು ನಿಜಾತ್ಮ ಯಾತ್ರೆಯನು
ಜಗದ ಜೀವಿತದಿ ನಿಜ–ಜೀವಿತದ ಪೂರ್ತಿಯನು
ಬಗೆಯಲರಿತವನೆ ಸುಖಿ ಮಂಕುತಿಂಮ

ಎಂಬ ಡಾ. ಡಿ.ವಿ ಗುಂಡಪ್ಪನವರ ಈ ಮಾತನ್ನು ವಚನಕಾರರ ಸಾರ್ಥಕ ಬದುಕಿಗೆ ಹಿಡಿದ ಕೈಗನ್ನಡಿಯಾಗಿದೆ. ಅದಕ್ಕೆ ಅವರ ಸ್ಪಷ್ಟ ನಿಲುವು...

ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ
ಮುನಿಯಬೇಡ, ಅನ್ಯರಿಗೆವ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ಕೂಡಲ ಸಂಗಮನೊಲಿಸುವ ಪರಿ

ಈ ಸಾರ್ಥಕ ಲಕ್ಷಣಗಳನ್ನು, ಸೂತ್ರಗಳನ್ನು ಜಗತ್ತಿನ ಎಲ್ಲಾ ವ್ಯಕ್ತಿಗಳು ಅಳವಡಿಸಿಕೊಂಡಿದ್ದೇ ಆದರೆ ಬಸವಾದಿ ಶರಣರು ಕಟ್ಟ ಬಯಸಿದ ನೆಮ್ಮದಿಯ ಸಮಾಜದ ಲೋಕಕಲ್ಯಾಣಕ್ಕೆ ಅವರು ಪಟ್ಟ ಶ್ರಮ ಸಾರ್ಥಕವಾಗುವುದರಲ್ಲಿ ಸಂದೇಹವಿಲ್ಲ. ಸಮಾಜದಲ್ಲಿ ಅನೇಕ ಆಕರ್ಷಣೆಗಳು, ಭ್ರಮೆಗಳು ವಾಸ್ತವತೆಯನ್ನು ಮರೆಮಾಚಿ ತಾಂಡವ ಮಾಡುತ್ತಿವೆ. ಅದೆಷ್ಟೋ ಜನರ ಮನಸ್ಸನ್ನು ಚಿತ್ತ ಚಾಂಚಲ್ಯಕ್ಕೆ ಒಳಪಡಿಸಿ ಮರುಳರನ್ನಾಗಿಸುತ್ತಿವೆ. ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ – ಈ ಪಂಚೇಂದ್ರಿಯಗಳಿಗೆ ಹಿತವಾಗಿ ಕಂಡುಬರುತ್ತಿವೆ. ಆ ಆಕರ್ಷಣೆಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಯಾರೂ ಹೋಗುವುದಿಲ್ಲ. ಅದನ್ನೇ ಬಸವಣ್ಣನವರು ಈ ವಚನದ ಮೂಲಕ ನಮ್ಮನ್ನು ಜಾಗೃತಗೊಳಿಸುತ್ತಾರೆ. ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳನ್ನು ವಿಷಯಗಳನ್ನಾಗಿ ಪರಿಭಾವಿಸಿ ಬಸವಣ್ಣನವರು ಇದನ್ನು ಹಸಿರಿಗೆ ಹೋಲಿಸಿದ್ದಾರೆ. ಪಶು ಸಹಜವಾದ ಮನುಷ್ಯ ತನ್ನ ಮುಂದಿರುವ ವಿಷಯಗಳನ್ನು ಹಸಿರು ಹುಲ್ಲನ್ನು ಆಹಾರವೆಂದು ಪರಿಭಾವಿಸಿ ಸಹಜವಾಗಿ ತಿನ್ನುತ್ತಾನೆ. ಆನಂತರ ಅನೇಕ ಗೊಂದಲಗಳಿಗೆ ಒಳಗಾಗುತ್ತಾನೆ. ಆ ಕಾರಣಕ್ಕಾಗಿಯೇ ಸುಬುದ್ಧಿ ಎಂಬ ಉದಕ ಬೇಕಾಗಿದೆ. ವಿಷಯ ರಹಿತನಾಗಲು ಈ ಸುಬುದ್ಧಿಯ ಅಗತ್ಯತೆ ಇದೆ. ಆ ಅಗತ್ಯತೆಯೇ ಶರಣರ ದಾರ್ಶನಿಕರ ಹಿತವಚನ, ಉತ್ತಮ ಸಂದೇಶಗಳಾಗುತ್ತವೆ. ಮನುಷ್ಯ ಸತ್ಯದ ನಿಲುವನ್ನು ಅರಿಯಬೇಕಾಗಿದೆ, ಸದ್ಗುಣದ ಫಲವನ್ನು ಬಿತ್ತಿ ಬೆಳೆಯಬೇಕಾಗಿದೆ. ಸತ್ಯದ ನಿಲುವನ್ನು ಅರಿಯದೆ, ಸದ್ಗುಣದ ಮೌಲ್ಯವನ್ನು ತಿಳಿಯದೆ ತನ್ನ ವ್ಯಕ್ತಿತ್ವವನ್ನು ಪರಿಪೂರ್ಣಗೊಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬುದನ್ನು ಬಸವಣ್ಣನವರು ತಿಳಿಸುತ್ತಾರೆ. ಇಂದಿನ ಅಕ್ಷರ ಪಡೆದ ಯುವ ಸಮುದಾಯ ಅನೇಕ ಆಕರ್ಷಣೆಗಳಿಗೆ ಒಳಗಾಗುತ್ತಿರುವುದನ್ನು ನಾವು ಅಲ್ಲಳೆಯುವಂತಿಲ್ಲ. ತನ್ನ ಮುಂದೆ ಕಾಣುವ ಭ್ರಮೆ ಮತ್ತು ಬಣ್ಣದ ಬದುಕಿನ ಸಂಗತಿಗಳನ್ನೇ ವಾಸ್ತವ ಎಂದು ನಂಬಿ ಅದರಿಂದ ದಾರಿತಪ್ಪಿ ಪರಿತಪಿಸುವ ಪರಿಸ್ಥಿತಿಯನ್ನು ಕಾಣಬಹುದಾಗಿದೆ. ಅದಕ್ಕೆ ವಿಷಯರಹಿತರಾದಾಗ ಮಾತ್ರ ಸುಬುದ್ಧಿ ಎಂಬ ಉದಕ ಕಾರ್ಯನಿರ್ವಹಿಸುತ್ತದೆ. ಆ ಸುಬುದ್ಧಿಯೆಂಬ ಉದಕವನ್ನು ಇಂತಹ ಸತ್ ಚಿಂತನೆಗಳಿಂದ ಪಡೆಯಬೇಕಾಗಿದೆ ಎಂಬುದು ಈ ವಚನದ ತಾತ್ಪರ್ಯ.

ಬಸವಣ್ಣನವರ ಈ ವಚನ ಮನುಷ್ಯನ ವರ್ತನೆಯನ್ನು ಸರಿಪಡಿಸಿಕೊಳ್ಳಲು, ಸಮಾಜ ಉತ್ತಮ ರೀತಿಯಲ್ಲಿ ಮುನ್ನಡೆಯಲು ಬಹು ಮುಖ್ಯವಾದ ಸಪ್ತ ಸೂತ್ರಗಳನ್ನು ಒಳಗೊಂಡಿದೆ. ಹಾಗೆಯೇ ಸ್ವತಂತ್ರ ಭಾರತದ ಸಂವಿಧಾನದ ನಿಯಮಗಳನ್ನೂ ಒಳಗೊಂಡಿದೆ. ಕಳ್ಳತನ ಮಾಡುವುದು, ಕೊಲ್ಲುವುದು, ಹಿಂಸಿಸುವುದು, ಸುಳ್ಳನ್ನು ಹೇಳುವುದು, ತನ್ನನ್ನು ಹೊಗಳಿಸಿಕೊಳ್ಳುವುದು, ಬೇರೆಯವರನ್ನು ಸದಾ ತೆಗಳುವುದು, ಇತರರಿಗೆ ನೋವನ್ನು ಉಂಟುಮಾಡುವ ಅದೆಷ್ಟೋ ಸನ್ನಿವೇಶಗಳು ಸಮಾಜದಲ್ಲಿ ನಿತ್ಯ ನಿರಂತರವಾಗಿ ನಡೆಯುತ್ತಿವೆ. ಸಮಾಜದಲ್ಲಿ ಶಾಂತಿ ನೆಲೆಗೊಳ್ಳಬೇಕಾದರೆ ಅಹಿಂಸೆ ನಮ್ಮ ಮಧ್ಯೆ ನೆಲೆಸಿದಾಗ ಮಾತ್ರ. ಪರಸ್ಪರರನ್ನು ದ್ವೇಷಿಸದೆ, ಪ್ರೀತಿಸುವ ಮೂಲಕ, ಗೌರವಿಸುವ ಮೂಲಕ ತನ್ನಂತೆ ಇತರರನ್ನು ಪರಿಭಾವಿಸಬೇಕಾದ ಅಗತ್ಯತೆಯನ್ನು ಈ ವಚನ ಹೇಳುತ್ತಿದೆ. ಕೂಡಲಸಂಗಮನನ್ನು ಒಲಿಸಿಕೊಳ್ಳುವುದೆಂದರೆ ತನ್ನ ಆತ್ಮಸಾಕ್ಷಿಗೆ ಅನುಗುಣವಾಗಿ ಬದುಕುವುದು ಎಂದರ್ಥ ಮಾಡಿಕೊಳ್ಳಬೇಕಾಗುತ್ತದೆ. ತನ್ನನ್ನು ಒಳ್ಳೆಯ ಮಾರ್ಗದಲ್ಲಿ ನಡೆಸಲು ಈ ಸಪ್ತ ಸೂತ್ರಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಕಳ್ಳತನ ಮಾಡುವುದಾಗಲಿ, ಸುಳ್ಳನ್ನು ಹೇಳುವುದಾಗಲಿ, ಮೋಸವನ್ನು ಮಾಡುವುದಾಗಲಿ ಬೇರೆಯವರಿಗೆ ಹಿಂಸೆಯನ್ನು ಕೊಡುವುದಾಗಲಿ ಮಾಡದಿದ್ದರೆ ಅಂತಹ ವ್ಯಕ್ತಿಯ ಮನಸ್ಸು ಪ್ರಫುಲ್ಲವಾಗಿರುತ್ತದೆ, ಆಹ್ಲಾದ ಕರವಾಗಿರುತ್ತದೆ. ಆಗ ಯಾವುದೇ ದ್ವೇಷ, ಅಸೂಯೆ, ರಕ್ತ ಕ್ರಾಂತಿ ನಡೆಯುವುದಿಲ್ಲ ಎಲ್ಲರೂ ನಮ್ಮವರು ಎಂಬ ಭಾವನೆ ಬಂದಾಗ ಅಲ್ಲಿ ದ್ವೇಷ ಮೂಡಲು ಸಾಧ್ಯವಾಗುವುದಿಲ್ಲ. ಪರಸ್ಪರರನ್ನು ನೋಡುವ ದೃಷ್ಟಿಯೇ ಸಂಕುಚಿತವಾದಾಗ, ದೋಷದಿಂದ ಕೂಡಿದಾಗ ನಮ್ಮವರು ಬೇರೆಯವರಾಗಿಯೇ ಕಾಣುತ್ತಾರೆ. ಇದನ್ನೇ ಇಂದಿನ ಸಂವಿಧಾನದ ಆಶಯದಲ್ಲಿಯೂ ಬಳಸಿಕೊಳ್ಳಲಾಗಿದೆ. ಅದಕ್ಕೆ ಐಪಿಸಿ ಸೆಕ್ಷನ್ ನಲ್ಲಿ ಇಂತಹ ತಪ್ಪುಗಳನ್ನು ಮಾಡಿದಾಗ ಶಿಕ್ಷೆಯನ್ನು ಕೊಡುತ್ತಿರುವುದನ್ನು ಗಮನಿಸಬಹುದಾಗಿದೆ. ಅಂದರೆ ಬಸವಣ್ಣನವರು ಉತ್ತಮ ಸಮಾಜದ ನಿರಂತರ ಮುಂದುವರಿಕೆಗೆ ಅಂದೇ ಮಾರ್ಗದರ್ಶಿ ಸೂತ್ರಗಳನ್ನು ನೀಡಿದ್ದಾರೆ ಎನ್ನುವಲ್ಲಿ ಎರಡು ಮಾತಿಲ್ಲ. ಈ ಕಾರಣಕ್ಕಾಗಿಯೇ ವಚನ ಸಂಪತ್ತು ನಮ್ಮ ದಿನನಿತ್ಯದ ಜ್ಞಾನ

ಸಂಪತ್ತಾಗಿ, ಬದುಕಿನ ದಾರಿದೀಪವಾಗಿ, ಮಾರ್ಗದರ್ಶಕವಾಗಿ ನಿಂತಿದೆ ಎಂಬುದು ಸುಳ್ಳಲ್ಲ.

**ಪರಾಮರ್ಶನ ಗ್ರಂಥಗಳು**


1. ಬಸವ ವಚನಾಮೃತ., (ಸಂ) ಎಲ್. ಬಸವರಾಜು., ಬಸವ ಸಮಿತಿ., ಬೆಂಗಳೂರು–1., 1995
2. ಬಸವ ಪಥ., (ಸಂ)., ಮೃತ್ಯುಂಜಯ ರುಮಾಲೆ., ಬಸವ ಸಮಿತಿ., ಬೆಂಗಳೂರು–1., ಏಪ್ರಿಲ್ 218
3. ಕಾಯಕಯೋಗಿ., ಸ್ಮರಣಸಂಚಿಕೆ., ಶ್ರೀ ಗುರು ಸಿದ್ಧರಾಮೇಶ್ವರರ 832ನೇ ಜಯಂತೋತ್ಸವ ಸ್ವಾಗತ ಸಮಿತಿ., 14,15 ಜನವರಿ 2015
4. ವಚನ ವರ್ಷ., (ಸಂ) ಬಸವರಾಜ ಸಾದರ., ಪ್ರ ಅಖಿಲ ಶರಣ ಸಾಹಿತ್ಯ ಪರಿಷತ್ತು, ಮೈಸೂರು 2017.,
5. ಅನುಭಾವ ಸಂಗಮ., ಮುದ್ದೇನಹಳ್ಳಿ ನಂಜಯ್ಯ., ರವಿಚಂದ್ರ ಪ್ರಕಾಶನ., ತುಮಕೂರು., 2013